ಬೆಂಗಳೂರು ನಾಗರೀಕರಿಗೆ ಕೆಟ್ಟ ಹಾಲನ್ನು ಬೆಂಗಳೂರು ಡೈರಿಯವರು ಸರಬರಾಜು ಮಾಡಿರುವುದು.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ೧—೪—೧೯೪೫ರಂದು ಬೆಂಗಳೂರು ಡೈರಿಯಿಂದ ಬೆಂಗಳೂರಿನ ನಾಗರೀಕರಿಗೆ ಸರಬರಾಜು ಮಾಡಿದಂತಹ ಹಾಲು ಸಂಪೂರ್ಣ ಕೆಟ್ಟಿದ್ದು ಹಾಲು ಕಾಯಿಸದೆ ಒಡೆದು ಹೋಗಿದೆ ಪ್ಯಾಕೇಟಿನಲ್ಲಿದ್ದ ಹಾಲೂ ಒಡೆದಿದ್ದು ತುಂಬ ಶೋಚನೀಯ ಶೇಕಡ ೯೦ ರಷ್ಟು ಈ ಕೆಟ್ಟ ಹಾಲು ಪೂರೈಕೆಯಾಗಿದ್ದು ಶೇಕಡ ೫೦ ಪರ್ಸೆಂಟ್ ಹಾಲನ್ನು ವಾಪಸ್ಸು ಡೈರಿಯವರು ಪಡೆದಿರುತ್ತಾರೆ. ಕೇಟರ್ಸ್‌ಗಳನ್ನು ಇವರು ಎಂದೂ ತೊಳೆಯುವುದಿಲ್ಲ. ಕ್ರಿಮಿಕೀಟಗಳು ಹುಳುಗಳು ಇದರಲ್ಲಿ ಓಡಾಡುವುದರಿಂದ ಪ್ರಾಣಕ್ಕೆ ಇದು ಪೂರಕ. ವಿಷಯುಕ್ತ ಹಾಲು, ಈ ಕೆಟ್ಟ ಹಾಲು ಪೂರೈಕೆಯಿಂದ ನಗರದಲ್ಲಿ ವೈರಸ್ ಜ್ವರ. ತಲೆನೋವು ಆದರಿಂದ ಈ ವಿಚಾರವನ್ನು ಸದನದ ಗಮನಕ್ಕೆ ತಂದಿರುತ್ತೇವೆ. ಇವರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದರ ವಿವರಗಳು ಸಧ್ಯಕ್ಕೆ ನನ್ನ ಪತ್ತಿರ ಇಲ್ಲ. ವಾಹಿತಿಯನ್ನು ತರಿಸಿಕೊಂಡು ನಾಡಿದ್ದು ಉತ್ತರ ಹೇಳುತ್ತೇನೆ.

ಕೋಲಾರ ಜಿಲ್ಲೆಯ ಕೈವಾದರಲ್ಲಿ ವೈದ್ಯಾಧಿಕಾರಿಯು ಹೆಣ್ಣುಮಗಳ ಮೇಲೆ ಅತ್ಯಾಚಾರ ಮಾಡಿರುವುದು,

ಶ್ರೀ ಆರ್. ವೆಂಕಟರಾಮಯ್ಯ.—ಕೋಲಾರ ಜಿಲ್ಲೆಯ ಕೈವಾರದಲ್ಲಿ ಅಲ್ಲಿಯ ವೈದ್ಯಾಧಿಕಾರಿಯು ಒಬ್ಬ ಹೆಣ್ಣು ಮಗಳ ಆಕೆಯ ತಾಯಿಯನ್ನು ಕಾಣಲು ಬಂದಾಗ ಆತನು ಅಲ್ಲಿದ್ದ ಎಲ್ಲರನ್ನು ಹೊರಗಡೆಗೆ ಕಳುಹಿಸಿ ಅಲ್ಲಿದ್ದ ಹೆಣ್ಣು ಹುಡುಗಿಯ ಮೇಲೆ ಅತ್ಯಾಚಾರ ಮಾಡಿದ್ದು ಈ ಬಗ್ಗೆ ಎಲ್ಲಾ ಸ್ಥಳೀಯ ದಿನಪತ್ರಿಕೆಯಲ್ಲೂ ಪ್ರಕಟಣೆಯಾಗಿದೆ ಮಾನಮರ್ಯಾದೆ ಪ್ರಶ್ನೆ ಎಂದು ದೂರು ಅವರು ಕೊಡದಿದ್ದರೂ ಅಲ್ಲಿಯ ಜನತೆ ರೊಚ್ಚಿಗೆದ್ದು ಘೇರಾವ್ ಮಾಡಿದ್ದಾರೆ. ಆ ವೈದ್ಯಾಧಿಕಾರಿ ಈಗ ತಲೆತಗ್ಗಿಸಿಕೊಂಡು ಅಲ್ಲಿಂದ ವರ್ಗಾವಣೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದು ಜನತೆ ಆ ವೈದ್ಯಾಧಿಕಾರಿಯ ವಾಪಸ್ಸಾತಿಗೋಸ್ಕರ ಕಾಯುತ್ತಿದ್ದು, ಅಲ್ಲಿ ನಡೆದ ಈ ಅನ್ಯಾಯ ಅತ್ಯಾಚಾರ ಸಾರ್ವಜನಿಕರಲ್ಲಿ ತುಂಬಾ ಆಸಮಾಧಾನ ತಂದಿರುವ ಬಗ್ಗೆ ಈ ಅಮಾನುಷ ಕೃತ್ಯ ಎಸಗಿದ ಈ ವೈದ್ಯಾಧಿಕಾರಿ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? ಇಂಥ ಕೃತ್ಯವನ್ನು ಮಾಡಿ ಈ ವೈದ್ಯಾಧಿಕಾರಿಯು ರಾಜರೋಷವಾಗಿ ತಿರುಗಾಡುತ್ತಿದ್ದಾರೆ, ಇದರ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹಮಂತ್ರಿ).—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಸಾಕಷ್ಟು ಮಾಹಿತಿಗಳು ನನಗೆ ಇನ್ನು ಬಂದಿಲ್ಲ. ಇಂತಹ ಕೃತ್ಯ ಎಸಗಿದ್ದೇ ಆದರೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

ಜಮಖಂಡಿ ತಾಲ್ಲೂಕಿನ ಕೋಶ ಸಹಕಾರಿ ಏತ ನೀರಾವರಿ ಯೋಜನೆಯ ಮೋಟಾರ್ ಮತ್ತು ಪಂಪನ್ನು ದುರಸ್ತಿಗೊಳಿಸುವುದು.

ಶ್ರೀ ಬಾಬುರೆಡ್ಡಿ ತುಂಗಳ.—ಮಾನ್ಯ ಅಧ್ಯಕರೇ ಜಮಖಂಡಿ ತಾಲ್ಲೂಕು ಕೋಶ ಸಹಕಾರಿ ಏತ ನೀರಾವರಿ ಸಂಘದಲ್ಲಿಯ ಮೋಟಾರ್ ಹಾಗೂ ಪಂಪುಗಳು ಸಂಪೂರ್ಣ ಕೆಟ್ಟು ಹೋಗಿದ್ದು ಅವುಗಳು ದುರಸ್ತಿಗೆ ಬಂದಿದ್ದು ದುರಸ್ತಿಯಾಗದೆ ಸುಮಾರು ೪ ತಿಂಗಳಿಂದ ಕೆಲಸ ಸ್ಥಗಿತವಾಗಿ ೧,೧೦೦ ಎಕರೆ ಜಮೀನಿನ ರೈತರು ಬೆಳೆಯನ್ನು ಕಳೆದುಕೊಂಡು ಕಂಗಾಲಾಗಿದ್ದಾರೆ. ಸಂಘದಲ್ಲಿ ಈ ದೊಡ್ಡ ಪ್ರಮಾಣದ ೦೨,೦೦೦ ರೂಪಾಯಿಗಳನ್ನು ಖರ್ಚುವಾಡಿ ರಿಪೇರಿ ಮಾಡಿಸುವ ಸಮರ್ಥ್ಯ ಇಲ್ಲ. ರೈತರು ರಿಪೇರಿ ಮಾಡಿಸಿದ ದುಡ್ಡನ್ನು ಒಂದು ವರ್ಷದಲ್ಲಿ ಮರುಪಾವತಿ ಮಾಡಲು ತಯಾರಿದ್ದಾರೆ ಸರಕಾರ ಶೀಘ್ರವಾಗಿ ಕ್ರಮ ತೆಗೆದುಕೊಂಡು, ಪಂಪ್ ಮತ್ತು ಮೋಟಾರನ್ನು ದುರಸ್ತಿಗೊಳಿಸುವುದು ಅನಿವಾರ್ಯವಾಗಿದೆ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್ ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಇದರ ಮಾಹಿತಿಯನ್ನು ತರಿಸಿಕೊಂಡು ಇವರ ವಿವರಗಳನ್ನು ತೆಗೆದುಕೊಳ್ಳುತ್ತದೆಂದು ತಿಳಿಸುತ್ತೇನೆ.

ಪುರಸಭಾ ವ್ಯಾಪ್ತಿಯಲ್ಲಿರುವ ಭೂ-ಹೀನ ಕೃಷಿ ಕಾರ್ಮಿಕರಿಗೆ ಹೆರಿಗೆ ಭತ್ಯ ಕೊಡುವ ಬಗ್ಗೆ.

ಶ್ರೀ ಬಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರಕಾರದ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಸುತ್ತೋಲೆ ನಂಬರ್ ಎಸ್‌ಡಬ್ಲ್ಯೂ ೧೨೧ ಎಸ್‌ಡಬ್ಲ್ಯೂಡಬ್ಲ್ಯೂ ೮೪, ದಿನಾಂಕ ೨೭—೧೧—೧೯೮೪ರಲ್ಲಿರುವಂತೆ ಪುರಸಭಾ ವ್ಯಾಪ್ತಿಯಲ್ಲಿ ವಾಸವಿರುವ ಭೂಹೀನ ಕೃಷಿ ಕಾರ್ಮಿಕರು ಹಾಗೂ ಗುತ್ತಿಗೆ ಆಧಾರಿತ ಕಾರ್ಮಿಕರಿಗೆ ಹೆರಿಗೆ ಭತ್ಯೆ. ಪಡೆಯಲು ಅರ್ಹತೆ ಇಲ್ಲ ಎಂಬ ತರ್ಕಬದ್ಧವಾದ ಸೂಚನೆ ಹೊರಟಿದೆ. ವೃದ್ಧಾಪ್ಯವೇತನ, ಆಂಗವಿಕಲರ ವೇತನ, ವಿಧವಾ ಮಾಶಾಸನ ಇವಕ್ಕೆ ಗ್ರಾಮೀಣ ಪ್ರದೇಶ, ಪುರಸಭಾ ವಲಯ ಎಂಬ ತಾರತಮ್ಯವಿಲ್ಲ. ಹೀಗಿರುವಾಗ ಭೂಹೀನ ಕೃಷಿ ಕಾರ್ಮಿಕರು ಮತ್ತು ಗುತ್ತಿಗೆ ಆಧಾರಿತ ಕಾರ್ಮಿಕರು ಹಳ್ಳಿಗಳಲ್ಲಿ ಸಾಕಷ್ಟು ಕೆಲಸ ಸಿಗದೆ ಪಟ್ಟಣಕ್ಕೆ ವಲಸೆ ಬಂದ ಹಳ್ಳಿಗರೇ ಆದುದರಿಂದ ಈ ತೆರಿಗೆ ಭತ್ಯ ಅವರಿಗೆ ಸಹ ಆನ್ವಯವಾಗುವುದು ನ್ಯಾಯ ಹಾಗೂ ಮೌಲ್ಯಾಧಾರಿತ ನಿರ್ಣಯ ಆಗುವುದರಿಂದ ಈ ವಿಚಾರ ಸರಕಾರ ಪುನಃ ಪರಿಶೀಲಿಸಿ ಆಜ್ಞೆ ಹೊರಡಿಸಬೇಕಾಗಿ ಕೋರುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಈ ವಿಷಯದ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹೇಳಿದ ವಿಷಯದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಹುಡ್ಕೊ ಸ್ಕೀಮಿನಲ್ಲಿ ಗುಲ್ಬರ್ಗದಲ್ಲಿ ಕಟ್ಟಲಾದ ಮನೆಗಳು

ಶ್ರೀ ಶರಣ ಬಸಪ್ಪ ಬಸವಂತರಾವ್ ಮಾಲೀಪಾಟೀಲ್.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ನಗರದಲ್ಲಿ ಎಂ. ಐ ಜಿ ಎಲ್. ಐ. ಜಿ. ಮತ್ತು ಹೆಚ್. ಐ. ಜಿ. ಗ್ರೂಪ್‌ನವರಿಗೆ ಎರಡು ವರ್ಷಗಳ ಹಿಂದೆಯೇ ಸುಮಾರು ೭೦೦ ಮನೆಗಳನ್ನು ಕಟ್ಟಲಾಗಿತ್ತು. ಅವುಗಳ ಪೈಕಿ ೨೦೦ ಮನೆಗಳನ್ನು ಹಿಂದಿನ ಸರ್ಕಾರವೇ ಹಂಚಿಕೆ ಮಾಡಿತ್ತು. ಹಂಚಿಕೆಯಾದವರ ಮನೆಗಳು ಬಾಡಿಗೆಗೆ ಸಿಗದೇ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ. ಮನೆಯ ಮೌಲ್ಯವನ್ನು ಕೂಡ ಜಾಸ್ತಿ ಮಾಡಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಆದಷ್ಟು ಬೇಗ ಮನೆಗಳನ್ನು ಹಂಚಿಕೆ ಮಾಡಿ, ಕಂತಿನ ಮೂಲಕ ಹಣ ಕಟ್ಟುವುದಕ್ಕೆ ಅವಕಾಶ ಮಾಡಿ ಕೊಡುತ್ತಾರೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ವಾಮಿ, ಮನೆಗಳನ್ನು ಕಟ್ಟಿ ಎರಡು ವರ್ಷಗಳಾಗಿದ್ದರೂ ಯಾರಿಗೂ ಅಲಾಟ್‌ಮೆಂಟ್ ಮಾಡಿಲ್ಲ ಎನ್ನುವ ವಿಷಯವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ, ಇದಕ್ಕೆ ಕಾರಣ ಏನು ಎನ್ನುವುದನ್ನು ತಿಳಿದುಕೊಂಡು ಕಟ್ಟಡಗಳನ್ನು ಮುಗಿಸಿದ್ದರೆ, ಸ್ವಾಧೀನ ಯಾರಿಗೆ ಕೊಡಿಸಬೇಕೋ ಅವರಿಗೆ ಕೊಡಿಸಲಾಗುವುದು. ಹಣ ತಂಬ ವಿಚಾರದಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ೧೫ ದಿವಸದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ವಿಜಯನಗರ ಉಕ್ಕಿನ ಕಾರ್ಖಾನೆಯ ಭೂ ಸ್ವಾಧೀನದ ಬಗ್ಗೆ ಪರಿಹಾರ ಕೊಡುವುದು

ಶ್ರೀ ಯು. ಭೂಪತಿ.—ವಿಜಯನಗರ ಉಕ್ಕಿನ ಕಾರ್ಖಾನೆಗೆ ಸಂಬಂಧಪಟ್ಟಂತೆ ಸ್ವಾಧೀನಪಡಿಸಿಕೊಂಡಿರತಕ್ಕ ಜಮೀನಿಗೆ ಇದುವರೆವಿಗೂ ಯಾವುದೇ ರೀತಿಯ ಪರಿಹಾರ ಕೊಟ್ಟಿಲ್ಲ. ಪರಿಹಾರ ಕೊಡುವ ವಿಚಾರದಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಂಡಿದೆಯೆ ಎಂದು ಮಾನ್ಯ ಮಂತ್ರಿಯವರನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ.